ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ನವೆಂಬರ್ 10, 2020

ಸಂಪುಟ : 47 ಸಂಚಿಕೆ : 191 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com



# ಕಲ್ಯಾಣ ಮಂಟಪಗಳು ವ್ಯಾಪಾರಿ ಕೇಂದ್ರಗಳಾಗಿವೆ

### ರಾಣೇಬೆನ್ನೂರು ಶ್ರೀ ಸಿದ್ದೇಶ್ವರ ಸಮುದಾಯ ಭವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಶಾಸಕ ಡಾ. ಎಸ್ಸೆಸ್

ರಾಣೇಬೆನ್ನೂರು, ನ.9- 70-80 ವರ್ಷಗಳ ಹಿಂದೆ ದಾವಣಗೆರೆಯಲ್ಲಿ ರಾಜನಹಳ್ಳಿ ಹನುಮಂತಪ್ಪನವರು ಛತ್ರ ಕಟ್ಟಿಸಿದ್ದರು. ಅದನ್ನು ಪುಕ್ಕಟೆಯಾಗಿಯೇ ಕೊಡುತ್ತಿದ್ದರು. ಅದು ಅಪ್ಪಟ ಧರ್ಮಶಾಲೆಯೇ ಆಗಿತ್ತು. ಈಗ ಛತ್ರಗಳು ಕಲ್ಯಾಣ ಮಂಟಪಗಳಾಗಿದ್ದು, ಅವು ವ್ಯಾಪಾರೀಕರಣಗೊಂಡಿವೆ ಎಂದು ದಾವಣಗೆರೆ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

ಅವರು ಪಟ್ಟಣದ ಶ್ರೀ ಸಿದ್ದೇಶ್ವರ ಸಮುದಾಯ ಭವನದ ಉದ್ಘಾಟನಾ ಸಮಾರಂಭದಲ್ಲಿ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು.

ಹಿಂದೆ ಮನೆ ಮುಂದೆ ಚಪ್ಪರ ಹಾಕಿ ಮದುವೆಗಳನ್ನು ಮಾಡುತ್ತಿದ್ದರು. ಈಗ ಅದು ಸಾಧ್ಯವಾಗುವುದಿಲ್ಲ. ಹಾಗಾಗಿ ರಾಣೇಬೆನ್ನೂರು, ದಾವಣಗೆರೆ ಹಾಗೂ ಬೆಂಗಳೂರಿನಂತಹ ನಗರಗಳಲ್ಲಿ ಕಲ್ಯಾಣ ಮಂಟಪಗಳು ದುಡಿಮೆಯ ಮಾರ್ಗಗಳಾಗಿವೆ ಎಂದ ಎಸ್ಸೆಸ್, ಸಾರ್ವಜನಿಕರ ಹಣದಿಂದ ಕಟ್ಟಿದ ಈ ಕಲ್ಯಾಣ ಮಂಟಪ ಬಡವರಿಗೂ ದೊರಕುವಂತಾಗಲಿ ಎಂದು ಆಶಿಸಿದರು.

ಉದ್ಘಾಟನೆ ನೆರವೇರಿಸಿದ ಸಚಿವ ಬಿ.ಸಿ. ಪಾಟೀಲ್ ಮಾತನಾಡಿ, ಕೋವಿಡ್ ಹಾವಳಿಯಿಂದ ಸರ್ಕಾರ ಅದ್ದೂರಿ ಮದುವೆಗಳನ್ನು ನಿಷೇಧಿಸಿದೆ. ಈ ಕಾಯಿಲೆ ಕಡಿಮೆ ಆಗಿದೆಯೇ ಹೊರತು, ಸಂಪೂರ್ಣ ನಾಶವಾಗಿಲ್ಲ. ಕಾಯಿಲೆಗೆ ಇನ್ನೂ ಮದ್ದೇ ಸಿಕ್ಕಿಲ್ಲ. ಮದುವೆ ಮುಂತಾದ ಸಾಮೂಹಿಕ ಕಾರ್ಯಕ್ರಮಗಳು ನಡೆಯುವ ಇಂತಹ ಕಲ್ಯಾಣ ಮಂಟಪಗಳಲ್ಲಿ ಮಾಸ್ಕ್, ಸ್ಯಾನಿಟೈಜರ್ ಹಾಗೂ ಸಾಮಾಜಿಕ ಅಂತರ ಅವಶ್ಯವಿದೆ. ಈ ದಿಶೆಯಲ್ಲಿ ಸಮಿತಿ ಕಡ್ಡಾಯ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಗದಗ ಶಿವಾನಂದ ಮಠದ ಶ್ರೀ ಅಭಿನವ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಶಾಸಕ ಅರುಣಕುಮಾರ ಪೂಜಾರ, ಕೆಪಿಸಿಸಿ ಕಾರ್ಯದರ್ಶಿ ಪ್ರಕಾಶ ಕೋಳಿವಾಡ, ಸಾಧುವೀರಶೈವ ಸಮಾಜದ ಅಧ್ಯಕ್ಷ ಮಲ್ಲೇಶಪ್ಪ ಅರಕೇರೆ ಹಾಗು ಇನ್ನಿತರೆ ಗಣ್ಯರು ವೇದಿಕೆಯಲ್ಲಿದ್ದರು.

ಸಮಿತಿ ಅಧ್ಯಕ್ಷ ಚೆನ್ನಬಸಪ್ಪ ಗೌಡಶಿವಣ್ಣನವರ ಅಧ್ಯಕ್ಷತೆ ವಹಿಸಿದ್ದರು. ಪರಮೇಶ ಗೂಳಣ್ಣನವರ ಸ್ವಾಗತಿಸಿದರು. ಸೋಮು ಗೌಡಶಿವಣ್ಣನವರ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯಕ್ರಮದಲ್ಲಿ ದಾನಿಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

### ನಂಟಿನ ಗಂಟು ಬಿಚ್ಚಿದ ಎಸ್ಸೆಸ್

**ನಾನು ಈ ಊರಿನ ಮೊಮ್ಮಗ. ನನಗೆ ಈ ಊರಿನ ನಂಟು ಬಹಳ ಇದೆ. ಇಲ್ಲಿಗೆ ಬಂದು ಹಲಗೇರಿಗೆ ಬಾಕಿ ವಸೂಲಿಗಾಗಿ ಸೈಕಲ್ ತುಳಿಯುತ್ತಾ ಹೋಗುತ್ತಿದ್ದೆ. ಅಲ್ಲಿಂದ ಬಂದು ತಿಳುವಳ್ಳಿ ಶೆಟ್ಟರ ಮನೆಯಲ್ಲಿ ಮಲಗುತ್ತಿದ್ದೆ. ಅಂದಿಗೂ ಇಂದಿಗೂ ಇಲ್ಲಿ ಬಹಳಷ್ಟು ಬದಲಾವಣೆ ಆಗಿದೆ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಅವರು ತಮ್ಮ ಹಾಗೂ ರಾಣೇಬೆನ್ನೂರಿನ ಹಳೆಯ ಒಡನಾಟವನ್ನು ನೆನಪಿಸಿಕೊಂಡರು.**

# ಎರಡು ಗಂಟೆ ಮಾತ್ರ ಹಸಿರು ಪಟಾಕಿಗೆ ಅವಕಾಶ: ಎನ್‌ಜಿಟಿ

## ವಾಯು ಗುಣಮಟ್ಟ ಕಳಪೆಯಾಗಿರುವ ಕಡೆ ಪಟಾಕಿ ನಿಷೇಧ

ನವದೆಹಲಿ, ನ. 9 – ನವೆಂಬರ್‌ನಲ್ಲಿ ವಾಯು ಗುಣಮಟ್ಟ ಕಳಪೆಯಾಗಿರುವ ದೇಶದ ಎಲ್ಲ ನಗರ ಹಾಗೂ ಪಟ್ಟಣಗಳಲ್ಲಿ ಮಂಗಳವಾರದಿಂದಲೇ ಜಾರಿಗೆ ಬರುವಂತೆ ನವೆಂಬರ್ 30ರವರೆಗೆ ಪಟಾಕಿ ಮಾರಾಟ ಹಾಗೂ ಸಿಡಿಸುವುದರ ಮೇಲೆ ನಿಷೇಧ ಹೇರಿ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ (ಎನ್.ಜಿ.ಟಿ.) ಆದೇಶ ಹೊರಡಿಸಿದೆ.

ಎನ್.ಜಿ.ಟಿ. ಅಧ್ಯಕ್ಷ ನ್ಯಾಯಮೂರ್ತಿ ಆದರ್ಶ ಕುಮಾರ್ ಗೋಯಲ್ ಅವರ ನೇತೃತ್ವದ ಪೀಠ ಈ ಆದೇಶ ಹೊರಡಿಸಿದೆ.

ಮಧ್ಯ ಪ್ರಮಾಣದಲ್ಲಿ ವಾಯು ಗುಣಮಟ್ಟ ಇರುವ ಪ್ರದೇಶಗಳಲ್ಲಿ ಕೆಲ ಹಸಿರು ಪಟಾಕಿಗಳ ಮಾರಾಟಕ್ಕೆ ಅವಕಾಶ ನೀಡಬೇಕು. ಈ ಪ್ರದೇಶದಲ್ಲಿ ಎರಡು ಗಂಟೆ ಕಾಲ ಮಾತ್ರ ಪಟಾಕಿ ಸಿಡಿಸಲು ಅವಕಾಶ ಇರಬೇಕು ಎಂದು ಆದೇಶದಲ್ಲಿ ಹೇಳಲಾಗಿದೆ.



ಕಳೆದ ವರ್ಷ ನವೆಂಬರ್ ತಿಂಗಳ ವಾಯುಮಾಲಿನ್ಯವನ್ನು ಆಧಾರವಾಗಿಟ್ಟುಕೊಂಡು ಪಟಾಕಿ ನಿಷೇಧ ಇಲ್ಲವೇ ಹಸಿರು ಪಟಾಕಿಗಳಿಗೆ ಅವಕಾಶ ನೀಡುವ ಕುರಿತು ನಿರ್ಧಾರ ತೆಗೆದುಕೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಒಡಿಶಾ, ರಾಜಸ್ಥಾನ, ಸಿಕ್ಕಿಂ, ದೆಹಲಿ ಹಾಗೂ ಚಂಡೀಘಡ ಸೇರಿದಂತೆ, ಹಲವು ರಾಜ್ಯಗಳು ಈಗಾಗಲೇ ಪಟಾಕಿಗಳ ಮಾರಾಟ ಹಾಗೂ ಬಳಕೆ ಮೇಲೆ ನಿಷೇಧ ಹೇರಿರುವುದನ್ನು ಟ್ರಿಬ್ಯೂನಲ್ ಉಲ್ಲೇಖಿಸಿದೆ.

ಹಸಿರು ಪಟಾಕಿಗಳ ಬಳಕೆಗೆ ಅವಕಾಶ ನೀಡಬೇಕೆಂದು ಹಲವು ರಾಜ್ಯಗಳು ಮನವಿ ಮಾಡಿಕೊಂಡಿರುವುದನ್ನು ಪರಿಗಣಿಸಿರುವ ಟ್ರಿಬ್ಯೂನಲ್, ವಾಯು ಗುಣಮಟ್ಟ ಮಧ್ಯಮಕ್ಕಿಂತ ಹೆಚ್ಚಾಗಿರುವ ಕಡೆಗಳಲ್ಲಿ ಇದಕ್ಕೆ ಅವಕಾಶ ನೀಡಬಹುದು. ಆದರೆ, ವಾಯುಗುಣಮಟ್ಟ ಕಳಪೆಯಾಗಿರುವ ಕಡೆಗಳಲ್ಲಿ ಪಟಾಕಿಗಳಿಗೆ ಅವಕಾಶ ನೀಡುವುದು ಸಾವು ಹಾಗೂ ರೋಗಗಳಿಗೆ (2ನೇ ಪುಟಕ್ಕೆ)

# ದೀಪಾವಳಿಗೆ ಲೋಕಲ್ ಸರಕು ಖರೀದಿಸಲು ಕರೆ



ವಾರಣಾಸಿ (ಉತ್ತರ ಪ್ರದೇಶ), ನ. 9 – ದೀಪಾವಳಿ ಸಮಯದಲ್ಲಿ ಲೋಕಲ್ ಸರಕುಗಳಿಗೆ ಉತ್ತೇಜನ ನೀಡುವಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದು, ಸ್ಥಳೀಯವಾಗಿ ಉತ್ಪಾದಿಸಿರುವ ಸರಕುಗಳನ್ನು ಖರೀದಿಸುವುದರಿಂದ ಆರ್ಥಿಕತೆಗೆ ಹೊಸ ಉತ್ತೇಜನ ಸಿಗಲಿದೆ ಎಂದಿದ್ದಾರೆ.

ತಮ್ಮ ಸರ್ಕಾರ ಜಾರಿಗೆ ತಂದ ಕೃಷಿ ಸುಧಾರಣೆಗಳ ಬಗ್ಗೆ ಮಾತನಾಡಿರುವ ಪ್ರಧಾನಿ, ಈ ಸುಧಾರಣೆಗಳಿಂದಾಗಿ ರೈತರು ನೇರವಾಗಿ ಮಾರುಕಟ್ಟೆಯ ಸಂಪರ್ಕ ಪಡೆಯಲಿದ್ದಾರೆ. ಮಧ್ಯವರ್ತಿಗಳ ವ್ಯವಸ್ಥೆಯಿಂದ ಹೊರ ಹೋಗಲಿದ್ದಾರೆ ಎಂದು ತಿಳಿಸಿದ್ದಾರೆ.

ತಮ್ಮ ಲೋಕಸಭಾ ಕ್ಷೇತ್ರವಾದ ವಾರಣಾಸಿಯಲ್ಲಿ 614 ಕೋಟಿ ರೂ.ಗಳ ಮೊತ್ತದ ಹಲವಾರು ಯೋಜನೆಗಳಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿ ಮಾತನಾಡುತ್ತಿದ್ದ ಪ್ರಧಾನಿ, ಲೋಕಲ್ ಉತ್ಪನ್ನಗಳ ಖರೀದಿಯಿಂದ ಸ್ಥಳೀಯ ಹೆಗ್ಗುರುತು ಬಲವಾಗುವ (2ನೇ ಪುಟಕ್ಕೆ)

# ಡಿಎಸ್‌ಎಸ್ ಹಿರಿಯ ನಾಯಕ, ಹೋರಾಟಗಾರ ಜಯಣ್ಣ ಇನ್ನಿಲ್ಲ

ಬೆಂಗಳೂರು,ನ.9- ರಾಜ್ಯದ ದಲಿತ ಸಂಘರ್ಷ ಸಮಿತಿಯ ಹಿರಿಯ ನಾಯಕರೂ, ಭದ್ರಾ ಮೇಲ್ದಂಡೆ ನೀರಾವರಿ ಹೋರಾಟ ಸಮಿತಿಯ ಗೌರವಾಧ್ಯಕ್ಷರೂ ಆದ ಎಂ. ಜಯಣ್ಣ ಅವರು ಇಂದಿಲ್ಲಿ ನಿಧನರಾದರು.



ಬಹು ಅಂಗಾಂಗಗಳ ವೈಫಲ್ಯತೆಯಿಂದಾಗಿ ಇಲ್ಲಿನ ಎಂ. ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಕೆಲ ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ, ಚಿಕಿತ್ಸೆ ಫಲಕಾರಿಯಾಗದೇ ಇಂದು ರಾತ್ರಿ 9.30ರ ವೇಳೆಗೆ ಕೊನೆಯುಸಿರೆಳೆದರು.

ಮೃತರಿಗೆ ಸುಮಾರು 70 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ನಾಳೆ ದಿನಾಂಕ 10ರ ಮಂಗಳವಾರ ಬೆಳಿಗ್ಗೆ ಚಿತ್ರದುರ್ಗದಲ್ಲಿರುವ ಅವರ ನಿವಾಸಕ್ಕೆ ತಂದು, ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಅವರ ಕುಟುಂಬ ವರ್ಗದವರು ತಿಳಿಸಿದ್ದಾರೆ.

**ಸಂಕ್ಷಿಪ್ತ ಪರಿಚಯ :** ಕೋಟೆ ನಾಡು ಚಿತ್ರದುರ್ಗದವರಾದ ಎಂ. ಜಯಣ್ಣ ಡಿ.ಎಸ್.ಎಸ್. ಸಂಸ್ಥಾಪಕರಾಗಿದ್ದ ದಿ. ಪ್ರೊ. ಬಿ. ಕೃಷ್ಣಪ್ಪ ಅವರ ಆಪ್ತ ಒಡನಾಡಿಗಳಲ್ಲೊಬ್ಬರಾಗಿದ್ದರು. ಜಯಣ್ಣ, ದಲಿತ ಸಂಘರ್ಷ ಸಮಿತಿಯನ್ನು ಕರ್ನಾಟಕದಾದ್ಯಂತ ಸಂಘಟಿಸಿ ಬೆಳೆಸುವಲ್ಲಿ ದಿ. ಪ್ರೊ. ಬಿ.ಕೃಷ್ಣಪ್ಪ ಅವರ ಹೆಗಲಿಗೆ ಹೆಗಲು ಕೊಟ್ಟು ಶ್ರಮಿಸಿದ್ದರು.

ಡಿ.ಎಸ್.ಎಸ್. ಮಾತ್ರ ವಲ್ಲದೇ, ಅನೇಕ ಭೂ ಹೋರಾಟ, ದಲಿತರಿಗೆ ಭೂಮಿ ಕೊಡಿಸುವಲ್ಲಿ ಚಳುವಳಿ, ಭದ್ರಾ ಮೇಲ್ದಂಡೆ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಹೋರಾಟ ಹೀಗೆ ಒಂದಲ್ಲಾ ಒಂದು ಹೋರಾಟಗಳನ್ನು (3ನೇ ಪುಟಕ್ಕೆ)

# ಸಾಕ್ಷಿ ಸೃಷ್ಟಿಗಾಗಿ ಹತ್ಯೆ ಮುಂಚೆ ದೆಹಲಿಗೆ ಹೋಗಿದ್ದ ಕುಲಕರ್ಣಿ

ನವದೆಹಲಿ, ನ. 9 – ಬಿಜೆಪಿ ಕಾರ್ಯಕರ್ತ ಯೋಗೇಶ್ ಗೌಡ ಹತ್ಯೆಯಲ್ಲಿ ಭಾಗಿಯಾಗಿಲ್ಲ ಎಂದು ತೋರಿಸಿಕೊಳ್ಳುವ ಸಲುವಾಗಿ ಮಾಜಿ ಸಚಿವ ವಿನಯ್ ಕುಲಕರ್ಣಿ ಹತ್ಯೆ ನಡೆದ ಜೂನ್ 15, 2016ರ ಮುಂಚೆ ಹಾಗೂ ನಂತರ ದೆಹಲಿಗೆ ಪ್ರಯಾಣ ಮಾಡಿದ್ದಾಗಿ ಸಿ.ಬಿ.ಐ. ಆರೋಪಿಸಿದೆ.

ಕಳೆದ ಗುರುವಾರ ಕಾಂಗ್ರೆಸ್ ನಾಯಕ ಕುಲಕರ್ಣಿಯನ್ನು ಸಿ.ಬಿ.ಐ. ಬಂಧಿಸಿತ್ತು. ನಂತರ ನ್ಯಾಯಾಲಯ ಅವರನ್ನು ನ್ಯಾಯಾಂಗ ಕಸ್ಟಡಿಗೆ ವಹಿಸಿದೆ.

ಕುಲಕರ್ಣಿ ಜೂನ್ 12, 2016ರಂದು ದೆಹಲಿಗೆ ತೆರಳಿ, ಮರು ದಿನ ಬೆಳಿಗ್ಗೆ 10.40ಕ್ಕೆ ವಾಪಸ್ಸಾಗಿದ್ದರು. ಅದೇ ರೀತಿ ಹತ್ಯೆ ನಡೆದ ಜೂನ್ 16,2016ರ ಸಂಜೆ ದೆಹಲಿಗೆ ತೆರಳಿ ಜೂನ್ 18, 2016ರಂದು ವಾಪಸ್ಸಾಗಿದ್ದರು. ಟಿಕೆಟ್‌ಗಳನ್ನು ಪ್ರಯಾಣದ ದಿನವೇ ಬುಕ್ ಮಾಡಲಾಗಿತ್ತು ಎಂದು ಸಿಬಿಐ ಆರೋಪಿಸಿದೆ.

ಆಗ ಸಚಿವರಾಗಿದ್ದ ಕುಲಕರ್ಣಿ, ಜಿಲ್ಲಾ ಪಂಚಾಯ್ತಿ ಸದಸ್ಯರಾಗಿದ್ದ ಗೌಡ ಅವರು ಜಿಲ್ಲಾ ಪಂಚಾಯ್ತಿ ಚುನಾವಣೆಗೆ ಸ್ಪರ್ಧಿಸಬಾರದು ಎಂದು ತಿಳಿಸಿದ್ದರು. ಇದಕ್ಕೆ ಗೌಡ ಒಪ್ಪದೇ ಇದ್ದುದೇ ಹತ್ಯೆಗೆ ಕಾರಣವಾಗಿದೆ ಎಂದು ಸಿ.ಬಿ.ಐ. ತಿಳಿಸಿದೆ. ಈ ಹಿಂದೆ ಹಲವಾರು ಬಾರಿ ಕುಲಕರ್ಣಿ ಹಾಗೂ ಗೌಡ (2ನೇ ಪುಟಕ್ಕೆ)

# 17ರಿಂದ ಉನ್ನತ ಶಿಕ್ಷಣಕ್ಕೆ ಚಾಲನೆ

## ಸ್ನಾತಕೋತ್ತರ, ಅಂತಿಮ ಪದವಿ ವಿದ್ಯಾರ್ಥಿಗಳಿಗೆ ನೇರ ಪಾಠ

ಬೆಂಗಳೂರು, ನ. 9 – ರಾಜ್ಯದಲ್ಲಿ ಉನ್ನತ ಶಿಕ್ಷಣ ಚಟುವಟಿಕೆಗಳನ್ನು ನವೆಂಬರ್ 17ರಿಂದ ಆರಂಭಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ್ ತಿಳಿಸಿದ್ದಾರೆ.



ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ತರಗತಿ ಮತ್ತು ಪರೀಕ್ಷೆಗಳನ್ನು ನಡೆಸಲು ಯು.ಜಿ.ಸಿ. ಪ್ರಕಟಿಸಿರುವ ಮಾರ್ಗಸೂಚಿಯ ಅನ್ವಯ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದವರು ಹೇಳಿದ್ದಾರೆ.

ಸ್ನಾತಕೋತ್ತರ ಹಾಗೂ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಭೌತಿಕ ತರಗತಿಗಳನ್ನು ನ.17ರಿಂದ ಆರಂಭಿಸಲಾಗುವುದು. ಆದರೆ, ಇದಕ್ಕೆ ಪೋಷಕರು ಹಾಗೂ ವಿದ್ಯಾರ್ಥಿಗಳ ಒಪ್ಪಿಗೆ ಪತ್ರ ಅಗತ್ಯವಾಗಿದೆ.

ದೈಹಿಕ ಅಂತರ ಕಾಯ್ದುಕೊಳ್ಳಲು ಬೋಧನಾ, ಪ್ರಯೋಗಾಲಯ ಮತ್ತು ಪ್ರಾಜೆಕ್ಟ್ ತರಗತಿಗಳಿಗೆ ಅಗತ್ಯವಾದರೆ ಪಾಳಿ ವ್ಯವಸ್ಥೆ ಕಲ್ಪಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಭೌತಿಕ ತರಗತಿಗಳಿಗೆ ಹಾಜರಾಗಲು ಇಚ್ಛಿಸದ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ತರಗತಿಗಳನ್ನು ನಡೆಸಲಾಗುವುದು. ಈ ವಿದ್ಯಾರ್ಥಿಗಳ ಅನುಮಾನ ಅಥವಾ ಸಮಸ್ಯೆಗಳನ್ನು ನಿವಾರಿಸಲು ಪ್ರತಿನಿತ್ಯ ಸಂಪರ್ಕ ತರಗತಿಗಳನ್ನು ನಡೆಸಲಾಗುವುದು.

ಸ್ನಾತಕೋತ್ತರ ಹಾಗೂ ಅಂತಿಮ ವರ್ಷ ಹೊರತು ಪಡಿಸಿ ಉಳಿದೆಲ್ಲ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ತರಗತಿ ನಡೆಸಲಾಗುವುದು. ಇವರಿಗೂ ಸಹ ಪಠ್ಯಕ್ರಮದ ಬಗ್ಗೆ ಇರುವ ಅನುಮಾನ ಅಥವಾ ಸಮಸ್ಯೆಗಳ ನಿವಾರಣೆಗೆ ಪ್ರತಿದಿನ ಸಂಪರ್ಕ ತರಗತಿ ನಡೆಸಲಾಗುವುದು.

ಎಲ್ಲ ವಿದ್ಯಾರ್ಥಿಗಳಿಗೆ ಕನಿಷ್ಠ ಒಂದು ತಿಂಗಳ ಅಧ್ಯಯನ ಸಾಮಗ್ರಿಗಳನ್ನು ವಾಟ್ಸ್‌ಆಪ್, ಟೆಲಿಗ್ರಾಂ ಇಲ್ಲವೇ ಇ-ಮೇಲ್ ಮೂಲಕ ಕಳಿಸಲಾಗುವುದು. ಅಧ್ಯಯನ ಸಾಮಗ್ರಿಗಳನ್ನು ಕಾಲೇಜಿನ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿದೆ.

ಆನ್‌ಲೈನ್ ಹಾಗೂ ಸಂಪರ್ಕ ತರಗತಿಗಳಿಗೆ ಹಾಜರಾಗುವ (3ನೇ ಪುಟಕ್ಕೆ)

# ಹರಿಹರ ನಗರಸಭೆ ಪೌರಾಯುಕ್ತೆ ಎಸ್. ಲಕ್ಷ್ಮೀ ಎತ್ತಂಗಡಿಗೆ ಯತ್ನ

ಹರಿಹರ, ನ. 9- ಇಲ್ಲಿನ ನಗರಸಭೆ ಪೌರಾಯುಕ್ತರಾದ ಶ್ರೀಮತಿ ಎಸ್.ಲಕ್ಷ್ಮೀ ಅವರನ್ನು ವರ್ಗಾವಣೆ ಮಾಡಬೇಕೆಂದು ಕೆಲವರು ಟೊಂಕ ಕಟ್ಟಿ ನಿಂತು ಯಶಸ್ಸು ಪಡೆಯುವ ಹಂತದಲ್ಲಿದ್ದಾರೆ ಎನ್ನಲಾಗಿದೆ.

ಪೌರಾಯುಕ್ತರ ಪರ ಇರುವ ಮತ್ತೊಂದು ಗುಂಪು ಅವರನ್ನು ಹರಿಹರದಲ್ಲಿಯೇ ಉಳಿಸಿಕೊಳ್ಳಲು ಶತಾಯಗತಾಯ ಶ್ರಮಿಸುತ್ತಿದೆ. ಒಂದು ವೇಳೆ ವರ್ಗಾವಣೆಯಾದರೆ ಹೋರಾಟವನ್ನೂ ನಡೆಸಲು ಮುಂದಾಗಿರುವ ಬಗ್ಗೆ ಮೂಲಗಳು ತಿಳಿಸಿವೆ.



ಲಕ್ಷ್ಮೀ ಅವರು ಮಾಡಿರುವ ಜನಪರ ಕಾರ್ಯಗಳನ್ನು ಮೆಚ್ಚಿರುವ ಕೆಲವು ಸದಸ್ಯರು, ಕನ್ನಡ ಪರ ಸಂಘಟನೆ ಮುಖಂಡರು, ವಿವಿಧ ಸಂಘ ಸಂಸ್ಥೆಗಳ ಮುಖಂಡರು ವರ್ಗಾವಣೆ ತಡೆಯುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಲೇ ಇದ್ದಾರೆ.

ಹಲವು ವರ್ಷಗಳಿಂದ ಪೌರಾಯುಕ್ತೆಯಾಗಿದ್ದ ಲಕ್ಷ್ಮೀ, ಅಧಿಕಾರ ಸ್ವೀಕರಿಸಿದಾಗಿನಿಂದ ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಜಲಸಿರಿ ಯೋಜನೆ, ರಸ್ತೆ ಅಗಲೀಕರಣ, ಚರಂಡಿ, (2ನೇ ಪುಟಕ್ಕೆ)

# ಮಾದಕ : ಮಾಜಿ ಸಚಿವ ರುದ್ರಪ್ಪ ಲಮಾಣಿ ಪುತ್ರನ ಬಂಧನ

ಬೆಂಗಳೂರು, ನ. 9 – ಡಾರ್ಕ್‌ನೆಟ್ ಮೂಲಕ ಮಾದಕ ಪಡೆದಿದ್ದ ಇಬ್ಬರಿಗೆ ಆಶ್ರಯ ನೀಡಿದ ಆರೋಪದ ಮೇಲೆ ಕಾಂಗ್ರೆಸ್ ನಾಯಕ ಹಾಗೂ ಮಾಜಿ ಸಚಿವ ರುದ್ರಪ್ಪ ಲಮಾಣಿ ಪುತ್ರ ದರ್ಶನ್ ಲಮಾಣಿ ಅವರನ್ನು ವಶಕ್ಕೆ ತೆಗೆದುಕೊಂಡಿರುವುದಾಗಿ ಪೊಲೀಸರು ಹೇಳಿದ್ದಾರೆ.

ಮಾದಕ ಪಡೆದಿದ್ದ ಇಬ್ಬರು ಗೋವಾದಲ್ಲಿ ದರ್ಶನ್ ಲಮಾಣಿ ಜೊತೆ ಪತ್ತೆಯಾಗಿರುವುದಾಗಿ ಸೆಂಟ್ರಲ್ ಕ್ರೈಮ್ ಬ್ರಾಂಚ್ ಪೊಲೀಸರು ತಿಳಿಸಿದ್ದಾರೆ. ಡಾರ್ಕ್‌ನೆಟ್ ಬಳಸಿ ಮಾದಕ ರವಾನಿಸುತ್ತಿದ್ದುದು ತನಿಖೆ ನಡೆಸುವಾಗ ಈ ಬೆಳವಣಿಗೆಯಾಗಿದೆ. ಆರೋಪಿಗಳಾದ ಹೇಮಂತ್ ಹಾಗೂ (2ನೇ ಪುಟಕ್ಕೆ)

# ಕೆ.ವಿ.ಶ್ರೀಧರ್ ಹೊನ್ನಾಳಿ ಪ.ಪಂ. ಅಧ್ಯಕ್ಷ

ಹೊನ್ನಾಳಿ, ನ.9- ಇಲ್ಲಿನ ಪಟ್ಟಣ ಪಂಚಾಯತಿ ನೂತನ ಅಧ್ಯಕ್ಷರಾಗಿ ಸೋಮವಾರ 14 ನೇ ವಾರ್ಡ್‌ನ ಕೆ.ವಿ ಶ್ರೀಧರ್, ಉಪಾಧ್ಯಕ್ಷರಾಗಿ 7ನೇ ವಾರ್ಡ್‌ನ ರಂಜಿತ ಚನ್ನಪ್ಪ ಇವರುಗಳು ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಪಂಚಾಯಿತಿ ಅಧಿಕಾರವನ್ನು ಬಿಜೆಪಿ ಪಡೆದುಕೊಂಡಿದೆ.

ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಗೆ ಅಭ್ಯರ್ಥಿಗಳಿಂದ ಒಂದೊಂದು ನಾಮಪತ್ರ ಸಲ್ಲಿಕೆಯಾಗಿದ್ದರಿಂದ ಚುನಾವಣಾಧಿಕಾರಿ (2ನೇ ಪುಟಕ್ಕೆ)

# ಯುಕೋ ಬ್ಯಾಂಕ್‌ಗೆ 105 ಕೋಟಿ ರೂ. ವಂಚನೆ : ಸಿಬಿಐ

ನವದೆಹಲಿ, ನ. 9 – ಯುಕೋ ಬ್ಯಾಂಕ್‌ಗೆ 105 ಕೋಟಿ ರೂ.ಗಳ ವಂಚನೆ ಮಾಡಿದ ಆರೋಪದ ಮೇಲೆ ಮಧ್ಯ ಪ್ರದೇಶದ ನಾರಾಯಣ ನಿರ್ಯಾತ್ ಕಂಪನಿ ಹಾಗೂ ಅದರ ನಿರ್ದೇಶಕ ಕೈಲಾಶ್ ಚಾಂದ್ ಗಾರ್ಗ್ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿದೆ.

2011ರಿಂದ 2013ರ ನಡುವೆ ಕಂಪನಿಯು 110 ಕೋಟಿ ರೂ.ಗಳಿಗೂ ಹೆಚ್ಚಿನ ಸಾಲವನ್ನು ಯುಕೋ ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್ ಹಾಗೂ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗಳ ಒಕ್ಕೂಟದಿಂದ ಪಡೆದುಕೊಂಡಿತ್ತು ಎಂದು ಸಿಬಿಐ ತಿಳಿಸಿದೆ.

ಕಂಪನಿಯ ಇನ್ನೋರ್ವ ನಿರ್ದೇಶಕ ಸುರೇಶ್ ಚಂದ್ ಗಾರ್ಗ್ ಹೆಸರನ್ನೂ ಸಹ (2ನೇ ಪುಟಕ್ಕೆ)

# ಜಗಳೂರು ಪಟ್ಟಣ ಪಂಚಾಯಿತಿ ಬಿಜೆಪಿ ವಶಕ್ಕೆ

## ಅಧ್ಯಕ್ಷರಾಗಿ ಆರ್. ತಿಪ್ಪೇಸ್ವಾಮಿ, ಉಪಾಧ್ಯಕ್ಷರಾಗಿ ಲಲಿತಮ್ಮ ಶಿವಣ್ಣ ಅವಿರೋಧ ಆಯ್ಕೆ

ಜಗಳೂರು, ನ. 9- ಪಟ್ಟಣ ಪಂಚಾಯ್ತಿ ನೂತನ ಅಧ್ಯಕ್ಷರಾಗಿ ಬಿಜೆಪಿ ಪಕ್ಷದ ಆರ್. ತಿಪ್ಪೇಸ್ವಾಮಿ ಹಾಗೂ ಉಪಾಧ್ಯಕ್ಷರಾಗಿ ಲಲಿತಮ್ಮ ಶಿವಣ್ಣ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇಂದು ಪಟ್ಟಣ ಪಂಚಾಯ್ತಿ ಸಭಾಂಗಣದಲ್ಲಿ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಬಿಜೆಪಿ ಪಕ್ಷದ ಆರ್. ತಿಪ್ಪೇಸ್ವಾಮಿ ಅಧ್ಯಕ್ಷ ಸ್ಥಾನಕ್ಕೆ ಮತ್ತು ಲಲಿತಮ್ಮ ಶಿವಣ್ಣ ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದರು.

ನಾಮಪತ್ರಗಳ ಪರಿಶೀಲನೆಯ ನಂತರ ನಿಗದಿತ ಸಮಯಕ್ಕೆ ಸರಿಯಾಗಿ ಚುನಾವಣಾಧಿಕಾರಿ ಹಾಗೂ ತಹಶೀಲ್ದಾರ್ ಡಾ. ನಾಗವೇಣಿ ಅವರು ಆರ್. ತಿಪ್ಪೇಸ್ವಾಮಿಯವರು ಅಧ್ಯಕ್ಷರಾಗಿ ಮತ್ತು ಲಲಿತಮ್ಮ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಣೆ ಮಾಡಿದರು.

ಒಟ್ಟು 18 ಸದಸ್ಯ ಬಲ ಹೊಂದಿರುವ ಪಟ್ಟಣ ಪಂಚಾಯ್ತಿಯಲ್ಲಿ ಬಿಜೆಪಿಯ 11 ಜನ ಸದಸ್ಯರಿದ್ದು, ನಿಚ್ಚಳ ಬಹುಮತ ಪಡೆದಿದೆ. ಉಳಿದಂತೆ ಕಾಂಗ್ರೆಸ್‌ನ 5 ಮತ್ತು ಜೆಡಿಎಸ್‌ನ ಇಬ್ಬರು ಸದಸ್ಯರಿದ್ದಾರೆ. ಚುನಾವಣಾ ಪ್ರಕ್ರಿಯೆಯಲ್ಲಿ ಚುನಾಯಿತ ಎಲ್ಲಾ 18 ಜನ ಸದಸ್ಯರು ಪಾಲ್ಗೊಂಡಿದ್ದರು. ಮೊದಲ ಅವಧಿಗೆ ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೂ ಹಾಗೂ ಉಪಾಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದು, ಸಹಜವಾಗಿ ಅಧ್ಯಕ್ಷ ಸ್ಥಾನಕ್ಕೆ ತೀವ್ರ ಪೈಪೋಟಿ ನಡೆದಿತ್ತು.

**ಬಿಜೆಪಿ ಸದಸ್ಯರಿಗೆ ವಿಪ್ ಜಾರಿ :** ಶಾಸಕ ಎಸ್. ವಿ. ರಾಮಚಂದ್ರ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಇಂದು ಬೆಳಿಗ್ಗೆ ಬಿಜೆಪಿಯ ಎಲ್ಲಾ 11 ಸದಸ್ಯರಿಗೆ ಬಿಜೆಪಿ ಮಂಡಲ ಅಧ್ಯಕ್ಷ ಹೆಚ್.ಸಿ. ಮಹೇಶ್ ವಿಪ್ ಜಾರಿ ಮಾಡಿದ್ದರು. ಪಕ್ಷದ ಹೈಕಮಾಂಡ್ ಸೂಚಿಸಿದವರು (3ನೇ ಪುಟಕ್ಕೆ)

### ಪುರಸಭೆಯಾಗಿ ಮೇಲ್ದರ್ಜೆಗೆ ಶೀಘ್ರ ಕ್ರಮ



ಪಟ್ಟಣವನ್ನು ಇಡೀ ಜಿಲ್ಲೆಯಲ್ಲಿ ಮಾದರಿ ನಗರವನ್ನಾಗಿ ಮಾಡಲಾಗುವುದು. ಅದಕ್ಕೂ ಮೊದಲು ಶೀಘ್ರವೇ ಪಟ್ಟಣ ಪಂಚಾಯ್ತಿ ಯನ್ನು ಪುರಸಭೆಗೆ ಮೇಲ್ದರ್ಜೆಗೇರಿಸಲು ತಕ್ಷಣ ಕ್ರಮ ಕೈಗೊಳ್ಳುವುದಾಗಿ ಶಾಸಕ ಎಸ್.ವಿ. ರಾಮಚಂದ್ರ ಭರವಸೆ ನೀಡಿದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ನಮ್ಮದೇ ಪಕ್ಷ ಅಧಿಕಾರದಲ್ಲಿದ್ದು, ಪಟ್ಟಣದ (3ನೇ ಪುಟಕ್ಕೆ)

### ಸೇಬು ಹಣ್ಣಿನ ಹಾರ ನಿರಾಕರಿಸಿದ ಶಾಸಕರು

ಚುನಾವಣೆ ನಂತರ ಕಾರ್ಯಕರ್ತರು ಸೇಬಿನ ಹಣ್ಣುಗಳ ಬೃಹತ್ ಹಾರವನ್ನು ಹಾಕಲು ಮುಂದಾದರು. ಆಗ ಶಾಸಕರು ಹಣ್ಣು ತಿನ್ನುವ ಆಹಾರ, ಅದನ್ನು ಅನಾವಶ್ಯಕವಾಗಿ ಚೆಲ್ಲಬಾರದು ಎಂದು ಹಾರ ಹಾಕಿಸಿಕೊಳ್ಳಲು ನಿರಾಕರಿಸಿದರು.

### ಹೆಗ್ಗೆರೆ ಗ್ರಾಮದ ಆರ್. ನಾಗಮ್ಮ ನಿಧನ



ಚಿತ್ರದುರ್ಗ ತಾಲ್ಲೂಕು ಭರಮಸಾಗರ ಹೋಬಳಿಯ ಹೆಗ್ಗೆರೆ ಗ್ರಾಮದ ವಾಸಿ, ನಾರದಮುನಿ ಬೋರ್‌ವೆಲ್ ಏಜೆನ್ಸಿ ಮಾಲೀಕರಾದ ದಿ॥ ನಾರಪ್ಪ ಎ.ಎಸ್. ಇವರ ಧರ್ಮಪತ್ನಿ **ಶ್ರೀಮತಿ ಆರ್. ನಾಗಮ್ಮ** ಅವರು ದಿನಾಂಕ 09.11.2020ರ ಸೋಮವಾರ ಸಂಜೆ 4.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 78 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.11.2020ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಹೆಗ್ಗೆರೆ ಗ್ರಾಮದ ಮೃತರ ತೋಟದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮೊ. : 99161 15444, 98868 31434

# ಪ್ರಥಮಾದ್ಯತೆ ಮೇರೆಗೆ ನೀರಾವರಿ ಸಮಸ್ಯೆ ನಿವಾರಣೆಗೆ ಒತ್ತಾಯ



ದಾವಣಗೆರೆ, ನ.9- ಜಿಲ್ಲೆಯ ನೀರಾವರಿ ಇಲಾಖೆಗಳ ಸಮಸ್ಯೆಗಳನ್ನು ಪ್ರಥಮಾದ್ಯತೆ ಮೇಲೆ ಪರಿಹರಿಸುವಂತೆ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಸೇರಿದಂತೆ ರೈತ ಪರ ಸಂಘಟನೆಗಳ ಜಿಲ್ಲಾ ಮುಖಂಡರ ನಿಯೋಗವು ಶಿವಮೊಗ್ಗದ ನೀರಾವರಿ ಇಲಾಖೆಯ ಮುಖ್ಯ ಅಭಿಯಂತರರನ್ನು ಒತ್ತಾಯಿಸಿದೆ.

ಸಂಘದ ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಮಾತನಾಡಿ, ಜಿಲ್ಲೆಯ ಸೂಳೆಕೆರೆ, ದೇವರಬೆಳಕೆರೆ ಹಾಗೂ ಇನ್ನಿತರೆ ಕೆರೆಗಳು ಒತ್ತುವರಿಯಾಗಿದ್ದು, ಸರ್ಕಾರದ ಆದೇಶವಾಗಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ. ತಕ್ಷಣ ಈ ಬಗ್ಗೆ ಇಲಾಖೆಯಿಂದ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ನೀರಾವರಿ ಇಲಾಖೆಯ ರಸ್ತೆಗಳು ಹಾಳಾಗಿದ್ದು, ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಕೊಮಾರನಹಳ್ಳಿ ಕಾಲುವೆಯಿಂದ ಜಿಟಿ ಕಟ್ಟೆಯವರೆಗೆ ಹಾಗೂ ಇನ್ನಿತರೆ ರಸ್ತೆಗಳ ಕಾಮಗಾರಿಯನ್ನು ಕ್ರಮಬದ್ಧವಾಗಿ ಮಾಡಲು ಕ್ರಮ ಕೈಗೊಳ್ಳಬೇಕು. ನೀರಾವರಿ ಇಲಾಖೆಯ ಭೂ ಸ್ವಾಧೀನ ಪ್ರಕರಣಗಳಿಗೆ 1992ರಿಂದ ಭೂ ಬೆಳೆ ನಷ್ಟ ಪರಿಹಾರವನ್ನು ಇನ್ನೂ ಸಹ ನೀಡಿಲ್ಲ. ತಕ್ಷಣ ಪರಿಹಾರದ ಹಣವನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಕೆರೆಗಳ ಅಕ್ರಮ ಸ್ವಾಧೀನ ತೆರವುಗೊಳಿಸಿ ಹರಿಹರ ತಾಲ್ಲೂಕು ಮಲೇಬೆನ್ನೂರು ಹೋಬಳಿಯ ಮುದ್ದಪ್ಪನ ಕೆರೆಯ ಹೂಳು ಮಣ್ಣನ್ನು ತೆಗೆಸಬೇಕು. 15 ದಿನಗಳ ಒಳಗಾಗಿ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ತೀವ್ರ ಸ್ವರೂಪದ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಈ ಸಂದರ್ಭದಲ್ಲಿ ಸಂಘದ ಮುಖಂಡರಾದ ಬಡಗಲಪುರ ನಾಗೇಂದ್ರ, ರವಿಕಿರಣ್ ಸೇರಿದಂತೆ ಇತರರು ಇದ್ದರು.

## ನಗರದಲ್ಲಿಂದು ಕೊಪ್ಪದಾಂಬ ದೇವಿ ಕೆಂಡದಾರ್ಚನೆ

ಹದಡಿ ರಸ್ತೆಯ ಕೊಂಡಜ್ಜಿ ಬಸಪ್ಪ ವೃತ್ತದಲ್ಲಿರುವ ಶ್ರೀ ಕ್ಷೇತ್ರ ದೇವಸ್ಥಾನದ ಶ್ರೀ ಕೊಪ್ಪದಾಂಬ ದೇವಿಯ 25ನೇ ವರ್ಷದ ಕೆಂಡದಾರ್ಚನೆ ಇಂದು ನಡೆಯಲಿದೆ. ಬೆಳಿಗ್ಗೆ 10 ಗಂಟೆಗೆ ಕುಂಭೋತ್ಸವ ಹಾಗೂ ಪಲ್ಲಕ್ಕಿಯ ಉತ್ಸವದ ನಂತರ 10.30 ಕ್ಕೆ ಕೆಂಡದಾರ್ಚನೆ ನಡೆಯಲಿದೆ.

## ಚನ್ನಗಿರಿ ಕ್ಷೇತ್ರಕ್ಕೆ ಇಂದು ಸಂಸದ ಜಿ.ಎಂ. ಸಿದ್ದೇಶ್ವರ

ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಇಂದು ಬೆಳಿಗ್ಗೆ 11.30ಕ್ಕೆ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಶಾಂತಿ ಸಾಗರಕ್ಕೆ ಬಾಗಿನ ಅರ್ಪಣೆ ಮತ್ತು ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

## ಯುರೋಪ್‌ನಿಂದ ಅಮೆರಿಕದ ಸರಕುಗಳ ಮೇಲೆ 4 ಶತಕೋಟಿ ಡಾಲರ್ ತೆರಿಗೆ

ಬ್ರುಸೆಲ್ಸ್, ನ. 9 – ವಿಮಾನ ಉತ್ಪಾದಕ ಕಂಪನಿಯಾದ ಬೋಯಿಂಗ್‌ಗೆ ಅಕ್ರಮವಾಗಿ ನೆರವು ನೀಡಿದ ಕಾರಣಕ್ಕಾಗಿ ಅಮೆರಿಕದ ಸರಕು ಮತ್ತು ಸೇವೆಗಳ ಮೇಲೆ 4 ಶತಕೋಟಿ ಡಾಲರ್ ಮೌಲ್ಯದ ತೆರಿಗೆ ಹೇರುವುದಾಗಿ ಯುರೋಪಿಯನ್ ಒಕ್ಕೂಟ ತಿಳಿಸಿದೆ. ದಂಡದ ಕ್ರಮಕ್ಕೆ ಅಂತರರಾಷ್ಟ್ರೀಯ ಮಧ್ಯಸ್ಥಿಕೆದಾರರು ಒಪ್ಪಿಗೆ ನೀಡಿದ ನಂತರ ಯುರೋಪಿನ ವ್ಯಾಪಾರಿ ಸಚಿವರು ದಂಡದ ಕ್ರಮಕ್ಕೆ ಮುಂದಾಗಿದ್ದಾರೆ.


**ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್. ಬ್ಯಾಂಕ್ ಲಿ.,**
#165/1-2, 3ನೇ ಮೇನ್, ಶ್ರೀ ವಾಸವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577002

**54ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರ**

ಕರ್ನಾಟಕ ರಾಜ್ಯ ಸರ್ಕಾರದ ಆದೇಶದ ಸಂಖ್ಯೆ: ಸಇ43ಸಿಎಲ್ಎಂ2020(ಇ) ಬೆಂಗಳೂರು, ದಿನಾಂಕ 21.10.2020ರ ಆದೇಶದ ಅಡಿಯಲ್ಲಿ ಬ್ಯಾಂಕಿನ 2019-20ನೇ ಸಾಲಿನ 54ನೇ ವಾರ್ಷಿಕ ಮಹಾಸಭೆಯನ್ನು, ದಿನಾಂಕ 12.12.2020ನೇ ಶನಿವಾರ ಸಂಜೆ 5.30 ಘಂಟೆಗೆ ಸರಿಯಾಗಿ 'ವಿಡಿಯೋ ಕಾನ್ಫರೆನ್ಸ್' (ವರ್ಚುಯಲ್ ಮೀಟಿಂಗ್) ಮೂಲಕ ಕರೆಯಲಾಗಿದೆ. ಆದ್ದರಿಂದ ತಾವು ಬ್ಯಾಂಕಿನಲ್ಲಿ ನೋಂದಣಿ ಮಾಡಿಕೊಂಡ ದೂರವಾಣಿ ಸಂಖ್ಯೆಗೆ ಬ್ಯಾಂಕು ನೀಡುವ ಸಾಂಕೇತಿಕ ಸಂಖ್ಯೆ (Link) ಮೂಲಕ ಅಂತರ್ಜಾಲದಲ್ಲಿ ವಾರ್ಷಿಕ ಸರ್ವ ಸದಸ್ಯರ ಸಭೆಯ ಕಾರ್ಯ ಕಲಾಪಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಲು ವಿನಂತಿ.

**: : ಸಭೆಯಲ್ಲಿ ನಡೆಯತಕ್ಕ ವಿಷಯಗಳು : :**

1. ಪ್ರಾರ್ಥನೆ.
2. ಸ್ವಾಗತ ಭಾಷಣ.
3. 54ನೇ ವಾರ್ಷಿಕ ಮಹಾಸಭೆಯ ವಿಷಯಸೂಚಿಯನ್ನು ಓದಿ ದಾಖಲಿಸಿಕೊಳ್ಳುವುದು.
4. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಶ್ರದ್ಧಾಂಜಲಿ.
5. ದಿನಾಂಕ 07.09.2019ನೇ ಶನಿವಾರದಂದು ನಡೆದ 53ನೇ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಓದಿ ದಾಖಲಿಸಿಕೊಳ್ಳುವುದು.
6. 2019-20ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸುವುದು.
7. ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೀಲಿಸಲ್ಪಟ್ಟ 2019-20ನೇ ಸಾಲಿನ ಲಾಭ-ನಷ್ಟ ತಃಖ್ತೆ ಮತ್ತು ಆಸ್ತಿ-ಜವಾಬ್ದಾರಿ ತಃಖ್ತೆಗಳನ್ನು ಪರಿಶೀಲಿಸಿ ಅಂಗೀಕರಿಸುವುದು.
8. 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿತ ಆಕ್ಷೇಪಣೆಗಳಿಗೆ ಆಡಳಿತ ಮಂಡಳಿಯ ಸಮಜಾಯಿಷಿಗಳನ್ನು ಪರಿಶೀಲಿಸುವುದು.
9. 2019-20ನೇ ಸಾಲಿನ ಅಂತ್ಯಕ್ಕೆ ಗಳಿಸಿದ ನಿವ್ವಳ ಲಾಭವನ್ನು ಸಹಕಾರ ಸಂಘಗಳ ಕಾಯ್ದೆ ಮತ್ತು ಉಪವಿಧಿಗಳನ್ವಯ ಲಾಭ ವಿಭಾಗಣೆಗೆ ಆಡಳಿತ ಮಂಡಳಿ ಶಿಫಾರಸ್ಸು ಮಾಡಿದ್ದನ್ನು ಅಂಗೀಕರಿಸುವುದು
10. 2019-20ನೇ ಸಾಲಿಗೆ ಮಂಜೂರಾದ ಬಜೆಟ್‌ಗಿಂತ ಹೆಚ್ಚುವರಿಯಾದ ಖರ್ಚನ್ನು ಅಂಗೀಕರಿಸುವುದು.
11. 2021-22ನೇ ಸಾಲಿಗೆ ಬಜೆಟ್ ಮಂಜೂರು ಮಾಡುವುದು.
12. 2020-21ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸಿಕೊಳ್ಳುವುದರ ಬಗ್ಗೆ.
13. 2020-21ನೇ ಸಾಲಿಗೆ ಆಡಳಿತ ಮಂಡಳಿ ತಯಾರಿಸಿದ ಕಾರ್ಯ ಚಟುವಟಿಕೆಗಳ ಅನುಮೋದನೆ.
14. ನಿಧಿಗಳ ವಾಸ್ತವ ಬಳಕೆ ಹಾಗೂ ವಿಮರ್ಶೆ.
15. ಬ್ಯಾಂಕಿನ ನಿರ್ದೇಶಕರು ಮತ್ತು ಅವರ ಸಂಬಂಧಿಗಳು ಪಡೆದಿರುವ ಸಾಲಗಳ ಪರಿಶೀಲನೆ.
16. ಆಡಳಿತ ಮಂಡಳಿ ನಿರ್ದೇಶಕರ ಅಥವಾ ಪ್ರಧಾನ ವ್ಯವಸ್ಥಾಪಕರ ಸಂಬಂಧಿಗಳು ಬ್ಯಾಂಕಿನ ಸೇವೆಗೆ ನೇಮಕಗೊಂಡಿದ್ದಲ್ಲಿ ಆ ಪಟ್ಟಿಯ ಪರಿಶೀಲನೆ.
17. ಇತರೆ ಸಹಕಾರ ಸಂಘಗಳಲ್ಲಿ ಬ್ಯಾಂಕಿನ ಸದಸ್ಯತ್ವ ಪಡೆದ ಬಗ್ಗೆ.
18. 2019-20ನೇ ಸಾಲಿನಲ್ಲಿ ಸದಸ್ಯರಾಗಿ ನೇಮಕಗೊಂಡ ಮತ್ತು ವಿವಿಧ ಕಾರಣಗಳಿಂದ ಸದಸ್ಯತ್ವವನ್ನು ಅಖೈರು ಮಾಡಿಕೊಂಡ ಸದಸ್ಯತ್ವದ ವಿವರವನ್ನು ಅಂಗೀಕರಿಸುವುದು.
19. ದಿನಾಂಕ 07.09.2019ರ ವಾರ್ಷಿಕ ಮಹಾಸಭೆಯಲ್ಲಿ ಕೈಗೊಂಡ ತೀರ್ಮಾನ ಮತ್ತು ಸತ್ಯಶೋಧನಾ ಸಮಿತಿಯ ವರದಿಯ ಆಧಾರದ ಮೇಲೆ ಕೆಲವು ಸದಸ್ಯರ ಸದಸ್ಯತ್ವವನ್ನು ರದ್ದುಗೊಳಿಸಿದ್ದನ್ನು ಅಂಗೀಕರಿಸುವ ವಿಚಾರ.
20. ಉಪವಿಧಿಗಳ ತಿದ್ದುಪಡಿ.
21. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಬರಬಹುದಾದ ಇತರೆ ವಿಷಯಗಳು.
22. ವಂದನಾರ್ಪಣೆ.

ದಿನಾಂಕ : 21.09.2020

ಆಡಳಿತ ಮಂಡಳಿ ಪರವಾಗಿ
ಸಹಿ/-
(ಪಡಗಲ್ ಪ್ರಶಾಂತ್)
ಪ್ರಧಾನ ವ್ಯವಸ್ಥಾಪಕರು

**ಸೂಚನೆ :**
1) ಅರ್ಹ ಸದಸ್ಯರು ಬ್ಯಾಂಕಿನ ಆರ್ಥಿಕ ತಃಖ್ತೆ ಮತ್ತು ವಿಷಯಸೂಚಿಗೆ ಸಂಬಂಧಿಸಿದಂತೆ ವಾರ್ಷಿಕ ಮಹಾಸಭೆಯ ದಿನಾಂಕಕ್ಕೆ 7 ದಿನಗಳ ಮುಂಚಿತವಾಗಿ ಲಿಖಿತ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಮಹಾಸಭೆಯಲ್ಲಿ ಚರ್ಚಿಸಲಾಗುವುದು.
2) ಸರ್ಕಾರದ ಆದೇಶದ ಅನ್ವಯ ಹಣಕಾಸು ವರ್ಷ 2019-20ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ವಿಡಿಯೋ ಕಾನ್ಫರೆನ್ಸ್ (ವರ್ಚುಯಲ್ ಮೀಟಿಂಗ್) ಮೂಲಕ ನಡೆಸಲು ಅನುಮತಿ ನೀಡಿರುವುದರಿಂದ ಮಾನ್ಯ ಸದಸ್ಯರು ತಮ್ಮ ದೂರವಾಣಿ ಸಂಖ್ಯೆಯನ್ನು ಬ್ಯಾಂಕಿನಲ್ಲಿ ನೋಂದಾಯಿಸಿಕೊಳ್ಳಲು ವಿನಂತಿ.
3) ಹಣಕಾಸು ವರ್ಷ 2015-16ನೇ ಸಾಲಿನಿಂದ ಡಿವಿಡೆಂಡ್ ಹಣವನ್ನು ಪಡೆಯದೇ ಇರುವ ಸದಸ್ಯರು ದಿನಾಂಕ 07.12.2019ರ ಒಳಗೆ ಪಡೆಯಲು ಸೂಚಿಸಿದ್ದಾಗ್ಯೂ ಪಡೆಯದೇ ಇರುವ ಸದಸ್ಯರು ದಿನಾಂಕ 07.12.2020ರ ಒಳಗೆ ಡಿವಿಡೆಂಡ್‌ನ್ನು ಪಡೆಯತಕ್ಕದ್ದು. ಇಲ್ಲವಾದಲ್ಲಿ ಸದರಿ ಡಿವಿಡೆಂಡ್ ಮೊತ್ತವನ್ನು ಬ್ಯಾಂಕಿನ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಿಕೊಳ್ಳಲಾಗುವುದೆಂದು ಅಂತಿಮವಾಗಿ ತಿಳಿಯಬಯಸುತ್ತೇವೆ.
4) ಬ್ಯಾಂಕಿನ ಉಪವಿಧಿಗಳನ್ವಯ ಪ್ರತಿ ಸದಸ್ಯನು ಕನಿಷ್ಠ ರೂ.1000/-ಗಳ ಷೇರು ಹಣವನ್ನು ಹೊಂದಿದ್ದಲ್ಲಿ ಮಾತ್ರ ಅರ್ಹ ಸದಸ್ಯನಾಗಿರುತ್ತಾನೆ. ಕನಿಷ್ಠ ಒಂದು ಷೇರಿನ ಮೊತ್ತ ರೂ.1000/-ಗಳ ಷೇರು ಹಣವನ್ನು ಹೊಂದದೇ ಇರುವ ಸದಸ್ಯರ ಹೆಸರು ಮತ್ತು ಸದಸ್ಯತ್ವ ಸಂಖ್ಯೆಯನ್ನು ಬ್ಯಾಂಕಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.
5) ಬ್ಯಾಂಕಿನ 'ಸುಸ್ತಿ ಸಾಲದ ಬಾಕಿದಾರರಿಗೆ' ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 20 (2) (ಎ1)ರ ಅಡಿಯಲ್ಲಿ ನೋಂದಾಯಿತ ಅಂಚೆ ಮೂಲಕ ಅಲಾಯಿದೆ ತಿಳುವಳಿಕೆ ಪತ್ರವನ್ನು ಜಾರಿ ಮಾಡಲಾಗಿದೆ. ಆದ್ದರಿಂದ ಕನಿಷ್ಠ ಷೇರು ಹೊಂದದೇ ಇರುವ ಸದಸ್ಯಬಾಂಧವರು ಮತ್ತು ಸುಸ್ತಿ ಬಾಕಿದಾರ ಸಾಲಗಾರರು ದಿನಾಂಕ 27.11.2020ರ ಶುಕ್ರವಾರ ಬ್ಯಾಂಕಿನ ಕೆಲಸದ ವೇಳೆಯ ಒಳಗಾಗಿ ಬಾಕಿ ಮೊತ್ತವನ್ನು ಸಂದಾಯ ಮಾಡುವ ಮೂಲಕ ಅರ್ಹ ಸದಸ್ಯರಾಗಿ ಮಹಾಸಭೆಯಲ್ಲಿ ಭಾಗವಹಿಸಲು ವಿನಂತಿಸಲಾಗಿದೆ.



**ಬೇಕಾಗಿದ್ದಾರೆ**
ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ:
ಶಾಂತಲಾ ವೆಡ್ಡಿಂಗ್ ಮಾಲ್
ಚಾಮರಾಜಪೇಟೆ, ದಾವಣಗೆರೆ - 577 001.
96861 95327





7 Hills Grocery (ಉತ್ತಮ ಸಂಪಾದನೆಗಾಗಿ) Eat Healthy...
7Hills Grocery ಸಮರ್ಪಿಸುತ್ತಿದೆ ದಿನಸಿ ಸಾಮಗ್ರಿಗಳು ಉತ್ತಮ ಗುಣಮಟ್ಟದಲ್ಲಿ, ಯೋಗ್ಯ ಬೆಲೆಯಲ್ಲಿ ಕೇವಲ Whatsapp ಮಾಡುವ ಮೂಲಕ ನಿಮ್ಮ ಸಾಮಗ್ರಿಗಳು ಮನೆಯ ಬಾಗಿಲಲ್ಲೇ ಪಡೆಯಿರಿ ಅದು ಕೂಡ 10% ರಿಯಾಯಿತಿ ದರದಲ್ಲಿ . (Rs.250/- ರಿಂದ ಪ್ರಾರಂಭ ಹೋಲ್ ಸೇಲ್ ದರದಲ್ಲಿ) ಸಂಪರ್ಕಿಸಿ ; 9606864777
ತಕ್ಷಣ ಬೇಕಾಗಿದ್ದಾರೆ ಡೋರ್ ಡೆಲಿವರಿಗಾಗಿ ಹುಡುಗರು ಹಾಗು ದಿನಸಿ ಕ್ಲೀನಿಂಗಾಗಿ ಮಹಿಳೆಯರು ಬೇಕಾಗಿದ್ದಾರೆ.
ಸಂಪರ್ಕಿಸಿ; 9071083033



**WANTED**
FULL TIME ASSISTANT ACCOUNTANT
With Experience in Tally Accounting
*Apply with Bio-Data immediately:*
**SHANTALA**
Chamrajpet, Davanagere
96861 95328, 96861 95323





ಹೃತ್ಪೂರ್ವಕ ಅಭಿನಂದನೆಗಳು
ಭಾರತೀಯ ಜನತಾ ಪಾರ್ಟಿ
ದಾವಣಗೆರೆ ಜಿಲ್ಲಾ ಉಪಾಧ್ಯಕ್ಷರಾಗಿ
ನೇಮಕಗೊಂಡಿರುವ ಉತ್ಸಾಹಿ ಯುವ ಮುಖಂಡರು,
ಸಂಘಟನಾ ಚತುರರು ಹಾಗೂ ಆತ್ಮೀಯರು ಆದ
ಶ್ರೀ ಶ್ರೀನಿವಾಸ್ ಟಿ ದಾಸಕರಿಯಪ್ಪ
ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು
ಶುಭ ಕೋರುವವರು
ಎ.ಎನ್.ಪಿ. ಸ್ನೇಹಿತರ ಬಳಗ


# ಬಿಜೆಪಿ ಸೇನೆಯಲ್ಲಿ ಯುವ ನೇತಾರರಾಗಿ ಪ್ರಜ್ವಲಿಸುತ್ತಿರುವ ಶ್ರೀ ಶ್ರೀನಿವಾಸ ದಾಸಕರಿಯಪ್ಪ

## ಇವರಿಗೆ ಶುಭ ಹಾರೈಸಿ ವಿವಿಧ ದೇವಸ್ಥಾನಗಳಲ್ಲಿ ಕಾರ್ತೀಕ ದೀಪೋತ್ಸವದ ಮೂಲಕ ಸಂಭ್ರಮಿಸಿದ ದಾವಣಗೆರೆಯ ಜನತೆ









ದಾವಣಗೆರೆ ಬಿಜೆಪಿಯ ಯುವನೇತಾರ, ಜಿಲ್ಲಾ ಉಪಾಧ್ಯಕ್ಷ ಹುದ್ದೆ ಸ್ವೀಕರಿಸಿ ಯುವ ಸೇನಾಪತಿಯಂತೆ ಪ್ರಜ್ವಲಿಸುತ್ತಿರುವ ಇವರಿಗೆ ಜಿಲ್ಲೆಯ ಜನತೆ ದಾವಣಗೆರೆಯ ಎಲ್ಲಾ ವಾರ್ಡ್‌ಗಳ ದೇವಾಲಯಗಳಲ್ಲಿ ಕಾರ್ತಿಕ ದೀಪೋತ್ಸವದೊಂದಿಗೆ ಸಂಭ್ರಮಿಸಿದರು.

ದಾವಣಗೆರೆ ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀಯುತ ಶ್ರೀನಿವಾಸ ದಾಸಕರಿಯಪ್ಪ ಅವರ ಆಯ್ಕೆಯಿಂದ ಹರ್ಷಗೊಂಡಿರುವ ಅಭಿಮಾನಿ ಬಳಗವು ಇಂದು ವಿನೋಬನಗರದ ಚೌಡೇಶ್ವರಿ ದೇವಸ್ಥಾನ, ವಿನೋಬನಗರದ ಸಿದ್ಧಿವಿನಾಯಕ ಗಣಪತಿ ದೇವಸ್ಥಾನ, ನಿಜಲಿಂಗಪ್ಪ ಬಡಾವಣೆಯ ಸ್ವಾಮಿ ಅಯಪ್ಪ ದೇವಸ್ಥಾನ, ರಾಂ ಎಂಡ್ ಕೋ ವೃತ್ತದ ಗಣಪತಿ ದೇವಸ್ಥಾನ, ಶಾಮನೂರಿನ ಆಂಜನೇಯ ದೇವಸ್ಥಾನ, ಹೊಂಡದ ಸರ್ಕಲ್, ಬಾತಿ, ನಿಟ್ಟುವಳ್ಳಿ, ಗೋಶಾಲೆ ಇನ್ನೂ ಅನೇಕ ವಾರ್ಡ್‌ಗಳ ಪ್ರಮುಖ ದೇವಸ್ಥಾನಗಳಲ್ಲಿ ಅಭಿಮಾನಿಗಳು ಅವರಿಗೆ ಶುಭ ಹಾರೈಸುತ್ತಾ ಸಾವಿರಾರು ದೀಪಗಳನ್ನು ಬೆಳಗುವ ಮೂಲಕ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಭಿಮಾನಿ ಬಳಗವು, ಅನೇಕ ವರ್ಷಗಳಿಂದ ಶ್ರೀನಿವಾಸ್ ದಾಸಕರಿಯಪ್ಪ ಅವರ ಸಮಾಜಮುಖಿ ಕಳಕಳಿಯನ್ನು ಗಮನಿಸುತ್ತಾ ಬಂದಿದ್ದೇವೆ. ಇವರ ತಂದೆಯವರ ಆಶಿರ್ವಾದ ಹಾಗು ಮಾರ್ಗದರ್ಶನದಲ್ಲಿ ಕಳೆದ ದಶಕದಿಂದ ಶ್ರಮಪಟ್ಟು ಇಂದು ಅತ್ಯುನ್ನತ ಉದ್ಯಮಿಯಾಗಿ ಬೆಳೆದಿದ್ದಾರೆ. ಆದರೆ, ಎಂದೂ ಸಹ ಎಷ್ಟೇ ಕಷ್ಟಕರ ಸನ್ನಿವೇಶದಲ್ಲೂ ಸಾಮಾಜಿಕ ಬದಲಾವಣೆಯಿಂದ ತಮ್ಮ ಜವಾಬ್ದಾರಿಗೆ ಹಿನ್ನಡೆಯಾಗದಂತೆ ರಾಜಕೀಯ ಬಿಟ್ಟು ಸಮಾಜದ ಹಿತದಷ್ಟಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ.

ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಜಿಯರವರಿಂದ ಪ್ರೇರಿತರಾದ ಶ್ರೀನಿವಾಸ ದಾಸಕರಿಯಪ್ಪನವರು ತಮ್ಮ ದ್ವಾರದಲ್ಲಿ ಸಹಾಯ ಅರಸಿ ಬಂದಂತಹ ಬಡವರು, ದೀನ-ದಲಿತರು, ಹಿಂದುಳಿದವರನ್ನು ಎಂದೂ ಕೈ ಬಿಡಲಿಲ್ಲ. ಸದಾ ಸಮಾಜದಲ್ಲಿರುವ ಶಕ್ತಿಹೀನರ, ವೃದ್ಧರ ಪರ ನಿಂತರು. ಸಾಮಾಜಿಕ ಕಳಕಳಿಗೆ ಧಕ್ಕೆಯಾಗದಂತೆ ರಾಜಕೀಯವನ್ನು ಬದಿಗೊತ್ತಿ ಸಮಾಜಮುಖಿಯಾಗಿ ದುಡಿದರು. ಇವರು ಗಳಿಸಿರುವ ಜನರ ಪ್ರೀತಿ ಮತ್ತು ಆಶೀರ್ವಾದವೇ ಇಂದು ಸಮಾಜದಲ್ಲಿ ತಲೆಯೆತ್ತಿ ನಡೆಸುತ್ತಿದೆ. ಸದಾ ಸಮಾಜಕ್ಕಾಗಿ ಮಿಡಿಯುವ ಇವರ ಸಂಕಲ್ಪ ಸಿದ್ಧಿಯಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

ಸಾವಿರಾರು ಯುವಪಡೆಯ ಹಾಗೂ ಸಮಾಜದ ಎಲ್ಲಾ ವರ್ಗದ ಜನರ ಬೆಂಬಲ ಹಾಗೂ ಇವರ ಸಂಘಟನಾ ಶಕ್ತಿಯನ್ನು ಅರಿತ ಪಕ್ಷ ಇವರನ್ನು ಆಯ್ಕೆ ಮಾಡಿದೆ. ದಾವಣಗೆರೆ ಬಿಜೆಪಿ ಎಂಬ ಶಿಖರಕ್ಕೆ ಕಿರೀಟದಂತಿರುವ ಇವರ ಕೀರ್ತಿ ಶಿಖರಕ್ಕೂ ಮೀರಿ ಆಕಾಶಕ್ಕೆ ವ್ಯಾಪಿಸಲಿ ಎಂದು ಬಯಸುತ್ತೇವೆ.

ಇವರು ಆಯ್ಕೆಯಾಗಲು ಸಹಕರಿಸಿದ ಮಾನ್ಯ ಲೋಕಸಭಾ ಸದಸ್ಯರಾದ ಜಿ.ಎಂ. ಸಿದ್ದೇಶ್ವರ್‌ರವರಿಗೆ, ಮಾನ್ಯ ಶಾಸಕರಾದ ಎಸ್.ಎ. ರವೀಂದ್ರನಾಥ್‌ರವರಿಗೂ, ಜಿಲ್ಲಾಧ್ಯಕ್ಷರಾದ ಶ್ರೀ ವೀರೇಶ್ ಹನಗಾವಡಿ ಮತ್ತು ಪಕ್ಷದ ಎಲ್ಲಾ ಮುಖಂಡರಿಗೂ, ಕಾರ್ಯಕರ್ತರಿಗೂ ತುಂಬು ಹೃದಯದ ಧನ್ಯವಾದಗಳನ್ನು ಹೇಳುತ್ತಿದ್ದೇವೆ.









SDK ಸೇನೆಯ ಅಭಿಮಾನಿಗಳು, ಹಿತೈಷಿಗಳು ಜಿಲ್ಲಾದ್ಯಂತ ದೇವಸ್ಥಾನಗಳಲ್ಲಿ ದೀಪೋತ್ಸವದೊಂದಿಗೆ ಸಂಭ್ರಮ ಆಚರಿಸಿದರು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte